ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-6, May- June 2025, Pp. 22-27
©*IIMRD*, Mysuru
IIMRD JOURNALS
www.iimrd.com

# ಪೂಜ್ಯಪಾದ ಚರಿತೆಯಲ್ಲಿ ಜೈನ ವ್ರತಗಳ ಮಹತ್ವ

**ದೀಪಿಕಾ ಬಿ.ಎಸ್[1] ಮತ್ತು ಪ್ರೊ. ಎಂ. ಜಿ. ಮಂಜುನಾಥ[2]**
[1]ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
[2]ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ದೇವಚಂದ್ರನು ಚಾಮರಾಜನಗರ ಜಿಲ್ಲೆಯ ಮಲೆಯೂರಿನ ಪ್ರಸಿದ್ಧ ಕವಿಯಾಗಿದ್ದಾನೆ. ಈತನ ಕಾಲವನ್ನು ಕ್ರಿ.ಶ.1770 ರಿಂದ 1842ರವರೆಗೆ ಗುರುತಿಸಬಹುದು. ಈತನ ತಂದೆ ದೇವಯ್ಯ ತಾಯಿ ಕುಸುಮಾಜಮ್ಮ. ಕವಿಯು ಜೈನ ಬ್ರಾಹ್ಮಣ ಪಂಗಡಕ್ಕೆ ಸೇರಿದ್ದು, ಈತನ ಮನೆತನವು ವಿದ್ವಾಂಸ ಪರಂಪರೆಯಿಂದ ಕೂಡಿತ್ತು. ಬಾಲ್ಯದಿಂದಲೂ ಈತ ಅನೇಕ ಶಾಸ್ತ್ರವಲೋಕನದಿಂದ ಲೌಕಿಕ ಪಾರಾಮಾರ್ಥಿಕ, ತತ್ವ, ನೀತಿ, ವೈದ್ಯ, ಜ್ಯೋತಿಷ್ಯ, ಮಂತ್ರವಾದಾದಿ ವಿದ್ಯೆಗಳನ್ನು ಕಲಿತು ಪರಿಣಿತಿ ಹೊಂದಿದ್ದನು. ಈತನು ಒಟ್ಟಾರೆಯಾಗಿ ಹನ್ನೆರಡು ಕೃತಿಗಳನ್ನು ರಚಿಸಿದ್ದಾನೆ. ಅವುಗಳನ್ನ ತನ್ನ ಪ್ರಸಿದ್ಧ ಕೃತಿಯಾದ ರಾಜಾವಳಿ ಕಥಾಸಾರದಲ್ಲಿ ದಾಖಲಿಸಿದ್ದಾನೆ. ಅದರಲ್ಲಿ "ಈವರಿಗೆ ನನ್ನಲ್ಪಮತಿಯಿಂದ ಸಂಗ್ರಹಿಸಿದ ಶಾಸ್ತ್ರಂಗಳು ಹದಿನಾಲ್ಕು ವರುಷದಿಂದ ಪದ ಪದ್ಯಂಗಳಂ ತೊಡಗಿ ಪರೀಧಾವಿ ಸಂವತ್ಸರದೊಳು ಪೂಜ್ಯಪಾದ ಚರಿತೆಯನು ಪ್ರಾರಂಭಿಸಿ ಮಾಡಿದ ಕೃತಿಗಳು ಸುಮೇರು ಶತಕ, ಯಕ್ಷಗಾನ, ರಾಮಕಥಾವತಾರ, ಭಕ್ತಿಸಾರ ಶತಕತ್ರಯ, ಶಾಸ್ತ್ರಗಾರ ಲಘುವೃತ್ತಿ, ಪ್ರವಚನ ಸಿದ್ಧಾಂತ, ದ್ರವ್ಯಸಂಗ್ರಹ, ದ್ವಾದಶಾನುಪ್ರೇಕ್ಷೆ ಕಥೆ ಸಹಿತ, ಧ್ಯಾನ ಸಾಮ್ರಾಜ್ಯ, ಆಧ್ಯಾತ್ಮವಿಚಾರವಾದಿ ಕರ್ನಾಟಕ ಸಂಸ್ಕೃತ ಬಾಲನುಡಿಯಿಂ ವಿರಚಿಸಿದೆನದರಿಂದ ಪಾಪವಿಚ್ಛಿಕ್ತಿ ಪುಣ್ಯ ಸಂಪಾದನ ದೊರೆಕೇಳ್ಗುಮೆಂದು ವಿರಚಿಸಿದೆಂ" ಎಂದು ದೇವಚಂದ್ರನು ತನ್ನ ಕೃತಿಯ ವಿವರವನ್ನು ದಾಖಲಿಸಿದ್ದಾನೆ. ಇವುಗಳಲ್ಲಿ ಪೂಜ್ಯಪಾದ ಚರಿತೆ, ರಾಮಕಥಾವತಾರ, ಭಕ್ತಿಸಾರ ಶತಕತ್ರಯ ಹಾಗೂ ರಾಜಾವಳಿ ಕಥಾಸಾರಗಳೆಂಬ ನಾಲ್ಕು ಕೃತಿಗಳಷ್ಟೆ ದೊರಕಿವೆ. ದೇವಚಂದ್ರನ ಹೇಳಿಕೆಯ ಆಧಾರದ ಮೇಲೆ ಆತನ ಮೊದಲ ಕೃತಿಯೇ 'ಪೂಜ್ಯಪಾದ ಚರಿತೆ'ಯಾಗಿದೆ. ಕರ್ನಲ್ ಕಾಲಿನ್ ಮೆಕೆಂಜಿಯು ಈತನನ್ನು 'ಸ್ಥಳಪುರಾಣಮುಂಟೆ' ಎಂದು ಕೇಳಿದಾಗ ಆತನು ತಾನು ರಚಿಸಿದ ಈ ಪೂಜ್ಯಪಾದ ಚರಿತೆಯನ್ನು ಓದಿ ಹೇಳಿದುದಾಗಿ ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ 'ಪೂಜ್ಯಪಾದ ಚರಿತೆ'ಯಲ್ಲಿ ಜೈನ ವ್ರತಗಳ ಮಹತ್ವ ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಜೈನ ಸಾಹಿತ್ಯ, ದೇವಚಂದ್ರ, ರಾಜಾವಳಿ ಕಥಾಸಾರ, ಪೂಜ್ಯಪಾದ ಚರಿತೆ.

## ಪೀಠಿಕೆ

ಸರ್ವಧರ್ಮ ಸಮನ್ವಯತೆಯನ್ನು ಸಾರುವ ಭಾರತ ದೇಶದಲ್ಲಿ ಅನೇಕ ಧರ್ಮಗಳು ಜನ್ಮತಾಳಿ ತಮ್ಮ ಮೂಲ ಸಿದ್ಧಾಂತಗಳನ್ನು ಇಂದಿಗೂ ಪ್ರತಿಪಾದಿಸುತ್ತಾ ಬಂದಿವೆ. ಅವುಗಳಲ್ಲಿ ಜೈನಧರ್ಮ

*Please cite this article as:* ದೀಪಿಕಾ ಬಿ.ಎಸ್, ಮತ್ತು ಎಂ. ಜಿ. ಮಂಜುನಾಥ. (2025). ಪೂಜ್ಯಪಾದ ಚರಿತೆಯಲ್ಲಿ ಜೈನ ವ್ರತಗಳ ಮಹತ್ವ.. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(6). ಪು.ಸಂ.* 22–27

ಅನಾದಿಕಾಲದ್ದಾಗಿದೆ. ಅಂತರಂಗದ ಶತ್ರುಗಳಾದ ರಾಗದ್ವೇಷಗಳನ್ನು ಜಯಿಸಿದವರನ್ನು 'ಜಿನ'ಎಂದು ಕರೆಯಲಾಗುತ್ತದೆ. ಇವರನ್ನು ವೀತರಾಗ, ಸರ್ವಜ್ಞ, ಪರಮಾತ್ಮ ಎಂದು ಕರೆಯುವುದುಂಟು.[2] ಇವರ ಅನುಯಾಯಿಗಳನ್ನು ಜೈನರೆಂದು ಕರೆಯಲಾಗುತ್ತದೆ. ಈ ಜಿನೇಶ್ವರನು ಸಾರಿದ ಪ್ರವೃತ್ತಿಯ ಮಾರ್ಗವೇ ಜೈನಾಚಾರವೆನ್ನಲಾಗುತ್ತದೆ. ಆತ್ಮನನ್ನು ಉನ್ನತಿಗೊಳಿಸಿ ಕಲ್ಯಾಣದ ದಾರಿಯಲ್ಲಿ ಮುನ್ನಡೆಸುವ ಈ ಆಚಾರಗಳೇ ಸದಾಚಾರಗಳಾಗಿವೆ.[3] ಮೇಲೆ ತೋರಿಕೆಯಾಚರಣೆಯಾದರೆ ಒಳಗಿಂದೊಳಗೆ ಮಹಾಪಾಪಗಳನ್ನು ಮಾಡುವವರಿದ್ದಾರೆ. ಬಾಹ್ಯಾಚಾರದಲ್ಲಿ ಒಳ್ಳೆಯವರಂತೆ ಕಂಡುಬಂದರು ಅಂತರಂಗದಲ್ಲಿ ಅನ್ಯಾಯವನ್ನು ಮಾಡುವ ಕಪಟಿಗಳನ್ನು ಸಹ ನಾವು ನೋಡಬಹುದು. ಇನ್ನು ಕೆಲವರು ಯಾವುದನ್ನು ತೋರ್ಪಡಿಸದೆ ಅಂತರಂಗದಲ್ಲಿ ಸದಾಚಾರಿಗಳಂತೆ ವರ್ತಿಸಿ ಬಾಹ್ಯಾಚಾರಿಗಳನ್ನು ನಿಂದಿಸುವ ಮೂಲಕ ತಮ್ಮನ್ನು ಶ್ರೇಷ್ಠರೆಂದು ತೋರಿಸಿಕೊಳ್ಳುವವರಿದ್ದಾರೆ. ಈ ಎಲ್ಲಾ ಬಾದಕಗಳು ದೂರವಾದ ಮೇಲೆಯೇ ಮನುಷ್ಯನು ಸಾದಾಚಾರಿಯಾಗಲು ಸಾಧ್ಯ. ಮಾನವ ಮಾಡುವ ಕಾರ್ಯಗಳು ಮೂಲದಲ್ಲಿ ಆತನ ಸ್ವಾರ್ಥದಿಂದ ಪ್ರೇರಿತವಾಗಿರುತ್ತವೆ. ಈ ಕಾರ್ಯಗಳು ಯಾವುದು ಒಳ್ಳಯದು, ಯಾವುದು ಕೆಟ್ಟದ್ದು ಎಂಬುದನ್ನು ಯಾವುದಾದರೊಂದು ನಿಶ್ಚಿತ ಮಾನದಂಡದಿಂದ ನಿರ್ಣಯವಾದಾಗಲೇ ಹೇಳಲು ಸಾಧ್ಯ. ಹಿಂಸೆ, ಸುಳ್ಳು, ಕಳ್ಳತನ, ಕುಶೀಲ, ಅಪರಿಗ್ರಹ ಇಂತಹ ಪಾಪಗಳನ್ನು ಎಷ್ಟು ಅಂಶದಲ್ಲಿ ತ್ಯಾಗ ಮಾಡುವನೋ ಅಷ್ಟು ಆ ವ್ಯಕ್ತಿಗಳು ಸಭ್ಯರಾಗುತ್ತಾರೆ. ಆಗ ಸಮಾಜವು ಶುದ್ಧವೂ, ಸುಖಿಯೂ ಆಗಿ ಪ್ರಗತಿ ಪಥದಲ್ಲಿ ಸಾಗುತ್ತದೆ. [4] ಜೈನ ಶಾಸ್ತ್ರಗಳಲ್ಲಿ ಈ ವ್ರತಗಳಿಗೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ದೇವಚಂದ್ರನು ತನ್ನ ಕೃತಿಯಾದ 'ಪೂಜ್ಯಪಾದ ಚರಿತೆ'ಯಲ್ಲಿ ಈ ವ್ರತಗಳ ಮಹತ್ವವನ್ನು ಕುರಿತು ಸವಿವರವಾಗಿ ದಾಖಲಿಸಿದ್ದಾನೆ. ಈ ಜೈನ ವ್ರತಗಳಲ್ಲಿ ಐದು ಪಂಚಾಣು ವ್ರತಗಳು, ಮೂರು ಗುಣ ವ್ರತಗಳು ಹಾಗೂ ನಾಲ್ಕು ಶಿಕ್ಷಾವ್ರತಗಳನ್ನು ಕುರಿತು ವಿವರಿಸಿದ್ದಾನೆ. ಐದು ಅಣುವ್ರತಗಳೆಂದರೆ ಕೊಲೆ, ಹುಸಿ, ಕಳವು, ಪರದಾರ, ಅತಿಕಾಂಕ್ಷೆಗಳನ್ನು ಮಾಡದಿರುವುದೆಂದು ಹಾಗೂ ಅವುಗಳ ಅತಿಚಾರಗಳೊಂದಿಗೆ ವಿವರವಾಗಿ ಹೇಳಿದ್ದಾನೆ.

**ಕೊಲ್ಲದಿರುವುದು (ಅಹಿಂಸೆ)**

ಪಂಚಾಣುವ್ರತಗಳಲ್ಲಿ ಮೊದಲನಯದೇ ಅಹಿಂಸಾಣುವ್ರತವಾಗಿದೆ. ಕೊಲ್ಲುವುದುದನ್ನು ಪುಣ್ಯವೆಂದುಕೊಳ್ಳುವುದು ಅನೇಕ ವರ್ಷಗಳವರೆಗೆ ಬದುಕುವುದಕ್ಕಾಗಿ ವಿಷವನ್ನು ಕುಡಿದಂತಾಗುತ್ತದೆ ಎಂದು ಒಂದು ನಿದರ್ಶನದ ಮೂಲಕ ಹೇಳಿದ್ದಾನೆ. ಯಾವುದೇ ರೀತಿಯ ಪ್ರಾಣಿಗಳನ್ನು ಕೊಲ್ಲಬಾರದೆಂದು, ಅವುಗಳಿಂದ ತೊಂದರೆ ಬರುವುದನ್ನು ಸಹಿಸಿಕೊಳ್ಳಬೇಕು ಇಲ್ಲವಾದರೆ ತೊಂದರೆ ಬರದಂತೆ ನೋಡಿಕೊಳ್ಳಬೇಕು. ಈ ವ್ರತವನ್ನು ಅನುಸರಿಸಿದರೆ ಕೈವಲ್ಯಪದವಿಗೆ ಕಾರಣವಾಗುವುದೆಂದು ತಿಳಿಸಿದ್ದಾನೆ. ಹಾಗೆಯೇ ನಡೆಯುವಾಗ ಒಂದು ನೊಗದಷ್ಟು ದೂರ ನೆಲವನ್ನು ನೋಡಿ ಹೆಜ್ಜೆಯಿಡಬೇಕು. ಹೀಗೆ ಜೀವರಕ್ಷೆಯನ್ನು ಮಾಡುವಂತಹ ಭವ್ಯನಿಗೆ ಸ್ವರ್ಗ ಸುಖ ಪ್ರಾಪ್ತವಾಗುತ್ತದೆಂದು ತಿಳಿಸಿದ್ದಾನೆ. ಇದರಲ್ಲಿ ಕೆಲವು ಅತಿಚಾರಗಳನ್ನು ಕವಿ ಹೇಳಿದ್ದಾರೆ. ಪಶುಗಳನ್ನು, ಬಾಲಕರನ್ನು ಕೋಲುಗಳಿಂದ ಒಡೆಯುವುದು 'ವಧಾತಿಚಾರ' ವಾಗುತ್ತದೆ. ಜನಗಳಿಗೆ, ಪಕ್ಷಿಗಳಿಗೆ ಸಂಕೋಲೆಯನ್ನು ಹಾಕುವುದು

'ಬಂಧಾತಿಚಾರ'ವಾಗುತ್ತದೆ. ಮೂಗು, ಕಿವಿ, ಅವಯಗಳನ್ನು ಭೇದಿಸುವುದು 'ಛೇಧಾತಿಚಾರ' ವಾಗುತ್ತದೆ. ದುರಾಸೆಯಿಂದ ಅತಿಭಾರವನ್ನು ಹೊರಿಸುವುದು 'ಭಾರತಿಚಾರ' ವಾಗುತ್ತದೆ. ತನ್ನನ್ನು ಸೇರಿದ ದಾಸ, ದಾಸಿ, ನೃತ್ಯ, ಪಸು ಇಂತವರಿಗೆ ಅನ್ನಪಾನ ಮೊದಲಾದವನ್ನು ನೀಡದಿರುವುದು 'ಅನ್ನಪಾನಾದಿ ವಿರೋಧವಾಗುತ್ತದೆ'. ಈ ರೀತಿಯ ಅತಿಚಾರಗಳು ಬಾರದಂತೆ ವ್ರತಗಳನ್ನು ಆಚರಿಸೇಕೆಂಬುದೇ ಜೈನ ತತ್ವದ ಆಶಯವಾಗಿದೆ.

**ಹುಸಿ ಅಥವಾ ಸುಳ್ಳು ಹೇಳದಿರುವುದು**

ಸುಳ್ಳಿಗೆ ಸಮಾನವಾದಂತಹ ಪಾಪವು ಬೇರೊಂದಿಲ್ಲವೆನ್ನಬಹುದು. ಇದರಿಂದಾಗಿ ಅನೇಕ ಅನರ್ಥಗಳು ತಲೆದೂರುತ್ತವೆ. ಸತ್ಯವನ್ನು ಹೇಳುವವರಿಗೆ ಸ್ವರ್ಗವು ಪ್ರಾಪ್ತವಾಗುತ್ತದೆ. ಇಹಪರಗಳಿಗೆ ಸತ್ಯವೇ ಹಿತವಾದಂತಹುದಾಗಿವೆ. ಸುಳ್ಳು ಎಂಬುದು ಪಾಪಬಂಧಕ್ಕೆ ಕಾರಣವಾಗುತ್ತದೆಂದು ಕವಿಯು ಈ ವ್ರತದ ಮಹತ್ವವನ್ನು ತಿಳಿಸಿದ್ದಾನೆ. ಇದರಲ್ಲಿನ ಅತಿಚಾರಗಳೆಂದರೆ ಶಾಸ್ತ್ರವನ್ನು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಹೇಳುವುದು 'ಪರಿವಾದ'ವಾಗಿದೆ. ಗಂಡಹೆಂಡತಿಯರ ಮಾತನ್ನು ಎಲ್ಲರಿಗೂ ಹೇಳುವುದು ಹಾಗೂ ರಹಸ್ಯವನ್ನು ಬಹಿರಂಗಗೊಳಿಸುವುದು. 'ಅಹೋಭ್ಯಾಖ್ಯಾನ' ಎನಿಸುತ್ತದೆ. ಪರರನ್ನು ಹಾಳು ಮಾಡುವುದರೊಂದಿಗೆ ಅವರನ್ನು ದೂಷಿಸುವುದು 'ಪೈಶೂನ್ಯ'ವೆನಿಸುತ್ತದೆ. ಸುಳ್ಳು ಬರವಣಿಗೆಯನ್ನು ಸರಿಯೆಂದು ಸಾಧಿಸಿ ತೋರಿಸಿಕೊಳ್ಳುವುದು 'ಕೂಟಲೇಖಕರಣ' ಎಂದೆನಿಸುತ್ತದೆ. ಕೊಟ್ಟ ವಸ್ತುವನ್ನು ಹಿಂದಿರುಗಿಸದೆ ಮರೆವೆಯೆಂದು ಮೋಸಗೊಳಿಸುವುದು 'ನ್ಯಾಸಾಪಹಾರ'ವಾಗಿದೆ. ಈ ಐದು ರೀತಿಯ ಅತಿಚಾರಗಳನ್ನು ಬಿಟ್ಟರೆ ದುಷ್ಟಭಾವವು ನಮ್ಮಿಂದ ದೂರಾಗುತ್ತದೆಂದು ಈ ವ್ರತದ ನಿಯಮಗಳನ್ನು ಕವಿ ದಾಖಲಿಸಿದ್ದಾನೆ.

**ಕಳ್ಳತನ ಮಾಡದಿರುವುದು (ಆಸ್ತೇಯ)**

ಕದಿಯದಿರುವವರನ್ನು ಧರೆಯಲ್ಲಿ ಸರ್ವಜನರು ಸಹ ಹೊಗಳಿ ಕೀರ್ತಿಸುವರು. ಈ ದೇಹವನ್ನು ಬಿಟ್ಟಮೇಲೆ ಸ್ವರ್ಗ ಸುಖವನ್ನನುಭವಿಸುವರೆಂದು ವ್ರತದ ಮಹತ್ವವನ್ನು ಹೇಳಿದ್ದಾನೆ. ಇದರ ಅತಿಚಾರಗಳೆಂದರೆ ಕಳ್ಳರೆನಿಸಿಕೊಂಡವರಿಂದ ವಸ್ತುಗಳನ್ನು ತರಿಸಿಕೊಳ್ಳುವುದು 'ಚೌರ ಪ್ರಯೋಗ'ವೆನಿಸುತ್ತದೆ. ಚೋರರು ಕದ್ದುತಂದ ವಸ್ತುಗಳನ್ನು ಕೊಂಡುಕೊಳ್ಳಲು 'ಚೌರಾಥಾದಾನ' ಎನಿಸುತ್ತದೆ. ಹೆಚ್ಚು ಬೆಲೆಯ ವಸ್ತುವನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುವುದು 'ವಿಲೋಪ'ವಾಗಿರುತ್ತದೆ. ಒಳ್ಳೆಯ ತುಪ್ಪದಲ್ಲಿ ಎಣ್ಣೆಯನ್ನು ಸೇರಿಸುವುದು 'ಸದೃಶ ಸಮ್ಮಿಶ್ರ' ಎಂದೆನಿಸುತ್ತದೆ. ದೊಡ್ಡ ಕೊಳಗ, ಬಳ್ಳ ಮಾನಗಳಿಂದ ಕೊಂಡುಕೊಂಡದ್ದನ್ನು ಚಿಕ್ಕ ಕೊಳಗ, ಬಳ್ಳ ಮುಂತಾದ ಮಾನಗಳಲ್ಲಿ ಮಾರುವುದನ್ನು 'ಹೀನಾಧಿಮಾನ' ಎಂದು ಗುರುತಿಸಲಾಗಿದೆ. ಈ ಐದು ಅತಿಚಾರಗಳನ್ನು ದೂರಮಾಡಿಕೊಂಡು ಈ ವ್ರತವನನ್ನು ಪಾಲನೆ ಮಾಡಬೇಕೆಂಬುದು ಕವಿಯ ಆಶಯವಾಗಿದೆ.

**ಪರದಾರದಲ್ಲಿ ಒಳಗೊಳ್ಳದಿರುವುದು (ಬ್ರಹ್ಮಚರ್ಯ)**

ಬ್ರಹ್ಮಚರ್ಯವೂ ಪಂಚಾಣು ವ್ರತಗಳಲ್ಲಿ ಮಹತ್ವದ್ದಾಗಿದೆ. ಪರಲಲನೆಯನ್ನು ರಾಗಿಸಕೂಡದು. ಅದು ಮಹಾಪಾಪದ ಬೀಜವಾಗುತ್ತದೆ. ರಾಗಿಸಿದ ಕಾರಣಕ್ಕಾಗಿ ನರಕಕ್ಕೆ ಹಾಗೂ ದುಃಖಕ್ಕೆ ದಾರಿಯಾಗುತ್ತೆದೆಂದು

ಈ ವ್ರತವನ್ನು ಕುರಿತು ಹೇಳಿದ್ದಾನೆ. ಪರಸತಿಯರನ್ನು ಬಿಡುವ ಪರಮವ್ರತವನ್ನು ಅನುಸರಿಸಿ ಭೂಮಿಯಲ್ಲಿ ಕೀರ್ತಿಯದ ಮೆರೆದು, ಮರು ಜನ್ಮದಲ್ಲಿ ಅಮರಸುಖ ಉಂಟಾಗುವುದೆಂದು ಈ ವ್ರತದ ಮಹತ್ವವಾಗಿದೆ. ಇದರಲ್ಲಿ ಅತಿಚಾರಗಳೆಂದರೆ ತನ್ನ ಮಕ್ಕಳನ್ನು ಬಿಟ್ಟು ಬೇರೆಯವರ ಮಕ್ಕಳಿಗೆ ವಿವಾಹವನ್ನು ಮಾಡಿಸುವುದು, ಪದೇ ಪದೇ ಅಶ್ಲೀಲವಾದ ಮರುಳುತನದಿಂದ ಮಾತನಾಡುವುದು, ಸಡಗರದಿಂದ ಭೋಗ ಸುಖವನ್ನನುಭವಿಸಿಯೂ ಅತಿಯಾಸೆ ಮಾಡುವುದು, ಕಂಡ ಕೇಳಿದ ವಸ್ತುಗಳೆಲ್ಲವೂ ತನಗೆ ಬೇಕೆನ್ನುವುದು ಇವೆಲ್ಲಾ ಅತಿಚಾರಗಳ ಬಿಡಬೇಕು ಆಗ ಮಾತ್ರ ಈ ವ್ರತದ ಪುಣ್ಯ ದೊರಕುತ್ತದೆ.

**ಅತಿಕಾಂಕ್ಷೆಯಿಲ್ಲದಿರುವುದು (ಅಪರಿಗ್ರಹ)**

ವ್ರತ ಮಾಡಿ ಮಿತಿಗೊಳಿಸಿದುದಕ್ಕಿಂತ ಹೆಚ್ಚು ಸಂಗ್ರಹಿಸುವುದು, ಬೇರೆಯವರ ಅತಿಲಾಭವನ್ನು ಕಂಡು ತನಗೆ ಅಷ್ಟಾಗಲಿಲ್ಲವೆಂದುಕೊಳ್ಳುವುದು, ಹೆಚ್ಚಾಗಿ ಸಂಪತ್ತನ್ನು ಸೇರಿಸುವುದು, ಪ್ರಾಣಿಗಳಿಗೆ ನೋವಾಗುವುದನ್ನು ಸಹ ಗಮನಿಸದೆ ಹೆಚ್ಚು ಭಾರವನ್ನು ಹೇರಿಸುವುದು ಇವೆಲ್ಲಾ ಅತಿಚಾರಗಳನ್ನು ಬೀಡಬೇಕೆನ್ನುವುದೇ ಈ ವ್ರತದ ನಿಯಮವಾಗಿದೆ.

ಈ ಐದು ವ್ರತಗಳೊಂದಿಗೆ ಮೂರು ಗುಣವ್ರತಗಳ ಮಹತ್ವವನ್ನು ಪೂಜ್ಯಪಾದ ಚರಿತೆಯಲ್ಲಿ ವಿವರಿಸಲಾಗಿದೆ. ಅವುಗಳೆಂದರೆ ದಿಗ್ವ್ರತ, ದೇಶಾವಕಾಶಿಕ, ಅನರ್ಥದಂಡ ವ್ರತಗಳಾಗಿವೆ.

**ದಿಗ್ವ್ರತ**

ದಿಗ್ವ್ರತವೆಂದರೆ ದಿಕ್ಕುಗಳ ದೂರವನ್ನು ನಿಶ್ಚಯಿಸಿಕೊಂಡು ಮುಂದೆ ಪ್ರಯಾಣ ಮಾಡುವುದು. ಹಾಗೂ ನಿರ್ದಿಷ್ಟವಾದಂತಹ ಪ್ರದೇಶಗಳಲ್ಲಿ ಸಂಚರಿಸುವ ವ್ರತವಾಗಿದೆ. ಇದರಲ್ಲಿ ಎಲ್ಲಾ ದಿಕ್ಕುಗಳಿಂದಲೂ ಸಂಚಾರದ ಮಿತಿಯಲ್ಲಿ ಒಳಗೊಂಡಿರುತ್ತದೆ. ಇದರಲ್ಲಿಯೂ ಅತಿಚಾರಗಳನ್ನು ಗುರುತಿಸಬಹುದು. ಎಚ್ಚರತಪ್ಪಿ ತಾನು ನಿಗದಿಪಡಿಸಿದ್ದಕ್ಕಿಂತಲೂ ಎತ್ತರದ ಪರ್ವತ, ಗಿಡ, ಮರಗಳನ್ನು ಏರುವುದರಿಂದ ಭವ್ಯ ಜನರಿಗೆ ಊರ್ಧ್ವಂತಿಚಾರವಾಗುತ್ತದೆ. ನಾಲ್ಕೂ ಕಡೆಗಲ್ಲಿಯೂ ಅತಿಕ್ರಮಿಸುವುದರಿಂದ 'ತಿರ್ಯಕ್' ಅತಿಚಾರ ಉಂಟಾಗುತ್ತದೆ. ನಿಗದಿತ ಲೆಕ್ಕವನ್ನು ಮೀರಿ ಕ್ಷೇತ್ರವನ್ನು ಹೆಚ್ಚಿಸಿಕೊಂಡು ಹೋಗುತ್ತಿರುವುದರಿಂದ 'ಕ್ಷೇತ್ರವೃದ್ಧಿ' ದೋಷವು ಉಂಟಾಗುತ್ತದೆ. ಮಾಡಿರುವುದನ್ನು ಮರೆತು ಮತ್ತೆ ಮತ್ತೆ ಮಾಡುವವನಿಗೆ 'ವಿಸ್ಮರಣಾತಿಚಾರ' ಉಂಟಾಗುತ್ತದೆ. ಈ ವ್ರತವನ್ನು ಅಸಂಸ್ಕೃತರು, ಸಾಮಾನ್ಯರು ಮಾಡುವಂತದ್ದಲ್ಲವೆಂದು ವ್ರತದ ನಿಯಮಗಳನ್ನು ತಿಳಿಸಲಾಗಿದೆ.

**ದೇಶಾವಕಾಶಿಕ ವ್ರತ**

ಮನೆ, ಗ್ರಾಮ, ಕಾಡು, ನದಿ, ತೊರೆ, ಪರ್ವತಗಳನ್ನು ಎಲ್ಲೆಯನ್ನಾಗಿ ಮಾಡಿಕೊಂಡ ಕಾಲ ನಿಯಮದೊಂದಿಗೆ ಅವುಗಳನ್ನು ಕಡಿಮೆ ಮಾಡಿಕೊಳ್ಳುವುದು ದೇಶಾವಕಾಶಿಕ ವ್ರತವಾಗಿದೆ. ಈ ವ್ರತವನ್ನು ಕುರಿತು ಹೆಚ್ಚಾಗಿ 'ಪೂಜ್ಯಪಾದ ಚರಿತೆ'ಯಲ್ಲಿ ದಾಖಲಾಗಿಲ್ಲ.

**ಅನರ್ಥದಂಡ ವ್ರತ**

ಪಾಪವನ್ನು ಉಪದೇಶ ಮಾಡುವುದು, ಹಿಂಸಾದಿ ವ್ಯವಹಾರಗಳಲ್ಲಿ ಹಾಗೂ ಕೆಟ್ಟ ಕೆಲಸಗಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಹಾಗೂ ಹಿಂಸೆಗೆ ಸಹಾಯಕವಾಗುವಂತಹ ವಸ್ತುಗಳನ್ನು ದಾನ ಮಾಡುವಂತಹುದು,

ಗಿಡಗಳನ್ನು ಕತ್ತಿರಿಸುವುದು, ಪ್ರಾಣಿಗಳಿಗೆ ಹಿಂಸೆ, ದುಃಖವನ್ನುಂಟು ಮಾಡುವುದು, ಚೋರರಿಗೆ ಸಂಬಂಧಿಸಿದ ಕಥೆಗಳು, ವೈರಕಥೆಗಳು, ಪೈಶೂನ್ಯ ಮುಂತಾದ ಜಿಗುಪ್ಸೆಯನ್ನುಂಟು ಮಾಡುವಂತಹ ಕಥೆಗಳನ್ನು ಕೇಳುವುದು ಮತ್ತು ಹೇಳುವುದು ಹಾಗೂ ಪ್ರಯೋಜನವಿಲ್ಲದೆ ಭೂಮಿಯನ್ನು ಅಗೆಯುವುದು ಇವೇ ಮೊದಲಾದ ಅತಿಚಾರಗಳನ್ನು ಮಾಡದಿರುವುದೇ ಈ ಅನರ್ಥದಂಡ ವ್ರತದ ಮಹತ್ವವಾಗಿದೆ. ನಿರರ್ಥಕ ಕಾರ್ಯಗಳಲ್ಲಿ ಆಸಕ್ತಿಯನ್ನು ತೋರಿಸದಿರುವುದು ಈ ವ್ರತದ ಆಶಯವಾಗಿದೆ.

**ಶಿಕ್ಷಾವ್ರತಗಳು**

ಶಿಕ್ಷಾವ್ರತಗಳಲ್ಲಿ ಸಾಮಾಯಿಕ, ಪ್ರೋಷದೋಪವಾಸ, ಭೋಗೋಪಭೋಗ, ವೈಯ್ಯಾ ವ್ರತಗಳೆಂಬ ನಾಲ್ಕು ಬಗೆಯನ್ನು ನೋಡಬಹುದು.

***ಸಾಮಾಯಿಕ***

ವಸ್ತುಸ್ತವ, ರೂಪಸ್ತವ, ಗುಣಸ್ತವಗಳಿಂದ ಮುಂಜಾನೆ, ಮಧ್ಯಾಹ್ನ ಹಾಗೂ ಸಾಯಂಕಾಲಗಳಲ್ಲಿ ಆತ್ಮ ಚಿಂತನೆ ಅಥವಾ ಆತ್ಮಧ್ಯಾನಗಳಲ್ಲಿ ನಿರತವಾಗುವ ವ್ರತವಾಗಿದೆ.

***ಭೋಗೋಪಭೋಗ***

ಭೋಗೋಪಭೋಗ ವ್ರತದಲ್ಲಿ ಜೀವವಧೆಗೆ ಕಾರಣವಾದಂತಹ ಹಾಗೂ ಅತಿಯಾಗಿ ಸಂಗ್ರಹಿಸಿದ ಭೋಗೋಪಭೋಗ ವಸ್ತುಗಳನ್ನು ಕ್ರಮವಾಗಿ ಕಡಿಮೆ ಮಾಡಿಕೊಳ್ಳುವಂತಹ ವ್ರತವಾಗಿದೆ. ನಾಲಗೆಯ ರುಚಿಗಾಗಿ ಮೂಲಂಗಿ, ಗೆಣಸು, ನಿಂಬಪುಷ್ಪ, ಹೂವಿನ ಗೆಡ್ಡೆ, ತ್ರಸ ಜೀವಗಳು ಹುದುಗಿರುವ ಹಣ್ಣುಗಳನ್ನು ತಿನ್ನುವುದು, ಐದು ಹಾಲಿನ ಮರಗಳಾದ ಅತ್ತಿ, ಆಲ, ಬಸರಿ, ಗೋಳಿ, ಅರಳಿ ಮರಗಳ ಹಣ್ಣುಗಳನ್ನು ತಿನ್ನುವುದು, ಕರುವು ಹುಟ್ಟಿದ ಹದಿನಾರು ದಿನಗಳು ಕಳೆಯುವವರೆಗೂ ಆ ಹಸುವಿನ ಹಾಲನ್ನು ಬಳಸುವುದು ಹೀಗೆ ಇವುಗಳೆಲ್ಲವನ್ನು ತ್ಯಜಿಸಿ, ತನ್ನ ಶರೀರಕ್ಕೆ ಆಗದ ವಸ್ತುಗಳನ್ನು ಬಿಡುವುದು ಪುಣ್ಯವೆನ್ನುವುದು ಈ ವ್ರತದ ನಿಯಮವಾಗಿದೆ.

***ಪ್ರೋಷದೋಪವಾಸ***

ಪ್ರತಿ ಅಷ್ಟಮಿ ಹಾಗೂ ಚತುರ್ದಶಿಗಳಲ್ಲಿ ಅನ್ನ, ಪಾನ, ಖಾದ್ಯ, ಲೇಹ್ಯಗಳನ್ನು ತ್ಯಾಗ ಮಾಡುವುದೇ ಪ್ರೋಷಧೋಪವಾಸ ವ್ರತವಾಗಿದೆ. ಇದರಲ್ಲಿ ಉಪವಾಸಾದಿ ದಿನಗಳಲ್ಲಿ ಪರಿಶೋಧಿಸದೆ ಪೂಜಾದ್ರವ್ಯಾಗಳನ್ನಿಡುವುದು, ಮಲ ಮೂತ್ರಗಳ ವಿಸರ್ಜನೆ, ಚಾಪೆ ಮೊದಲಾದವುಗಳನ್ನು ಹಾಸುವುದು, ವ್ರತದಲ್ಲಿ ಪ್ರೀತಿಯಿಲ್ಲದಿರುವುದು, ವ್ರತದ ಕಾರ್ಯಗಳನ್ನು ಮರೆಯುವುದು ಇವುಗಳೆಲ್ಲವೂ ಪ್ರೋಷದೋಷವಾಸ ವ್ರತ ನಿಯಮವಾದ ಅತಿಚಾರಗಳಾಗಿದೆ.

***ವೈಯ್ಯಾವ್ರತ***

ಇದು ದಾನಗಳನ್ನು ಕುರಿತಾಗಿ ಮಾಡುವಂತಹ ವ್ರತವಾಗಿದೆ. ಈ ವೈಯ್ಯಾವ್ರತದಲ್ಲಿ ನಾಲ್ಕು ದಾನಗಳ ಬಗ್ಗೆ ವಿವರಿಸಲಾಗಿದೆ. ಅವುಗಳೆಂದರೆ ಆಹಾರ, ಅಭಯ, ಬೇಷಜ, ಶಾಸ್ತ್ರಗಳಾಗಿವೆ. ತಪ್ಪು ಮಾಡಿ

ಪಶ್ಚಾತಾಪಪಟ್ಟವನನ್ನು ಮನ್ನಿಸುವುದು 'ಅಭಯದಾನ'ವಾಗಿದೆ. ರೋಗ ಪೀಡಿತರಿಗೆ ಔಷಧವನ್ನು ನೀಡುವುದು 'ಬೇಷಜದಾನ'ವಾಗಿದೆ. ಆಗಮಶಾಸ್ತ್ರವನ್ನು ತಿಳಿಯದವರಿಗೆ ಶಾಸ್ತ್ರವನ್ನು ಕಲಿಸುವುದು, ಧರ್ಮಗ್ರಂಥಗಳನ್ನು ನೀಡುವುದು 'ಶಾಸ್ತ್ರದಾನ'ವೆನಿಸುತ್ತದೆ. ಈ ರೀತಿಯಾದ ನಾಲ್ಕುದಾನಗಳನ್ನ ಮಾಡುವ ವ್ರತವನ್ನು ಪಾಲಿಸುವುದೇ ವೈಯ್ಯಾವ್ರತವಾಗಿದೆ. ಹಾಗೂ ಈ ವ್ರತವು ಜೈನಶಾಸ್ತ್ರದಲ್ಲಿ ಮಹತ್ವವನ್ನು ಪಡೆದಿದೆ.

ಈ ರೀತಿಯಾಗಿ ಒಟ್ಟು ಹನ್ನೆರಡು ಜೈನ ಶ್ರಾವಕ ವ್ರತಗಳನ್ನು ಗುರುಸಿಸಬಹುದು. ಐದು ಮಹಾವ್ರತಗಳೊಂದಿಗೆ ಏಳುಶೀಲವ್ರತಗಳು ಸೇರಿಕೊಂಡಿದೆ. ಇವುಗಳನ್ನು ಸಪ್ತಶೀಲ ಅಥವಾ ಸಪ್ತಶಿಕ್ಷಾಪದಗಳೆಂದು ಕರೆಯಲಾಗುತ್ತದೆ.[5] ಈ ಎಲ್ಲಾ ವ್ರತಗಳಿಂದಾಗಿ ವ್ಯಕ್ತಿಯು ದುಃಖ ಹಾಗೂ ನರಕಗಳಿಂದ ಮುಕ್ತರಾಗಬಹುದೆಂದು ಪೂಜ್ಯಪಾದ ಚರಿತೆಯಲ್ಲಿ ಹನ್ನೆರಡು ಜೈನ ವ್ರತಗಳ ಮಹತ್ವವನ್ನು ತಿಳಿಸಲಾಗಿದೆ.

**ಕೊನೆಟಿಪ್ಪಣಿಗಳು:**

1. ಸಣ್ಣಯ್ಯ, ಬಿ.ಎಸ್. *ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ.* ಕನಕಗಿರಿ ಪ್ರಕಾಶನ ಪುಟ.312
2. ಕೀರ್ತಿ ವಿಜಯಜಿ ಮಹಾರಾಜ್. *ಅರ್ಹತ್ ಧರ್ಮ ಪ್ರಕಾಶ.* ವಿಶ್ವಬಂಧು ಪ್ರಕಾಶನ, ಪುಟ.15
3. ಪುಟ್ಟಸ್ವಾಮಿ, ಡಿ. *ಜೈನ ತತ್ವಸಾರ ಸಂಗ್ರಹ.* ವಿವೇಕಾಭ್ಯುದಯ ಕಾರ್ಯಾಲಯ. ಪುಟ.88
4. ಮಿರ್ಜಿ ಅಣ್ಣಾರಾಯ. *ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ.* ಜನತಾ ಪ್ರಿಂಟಿಂಗ್ ಪ್ರೆಸ್, ಪುಟ. 315
5. ಅದೇ. ಪುಟ.324